# ಗ್ರಾಮ ಸೇವಾ ಯಜ್ಞ



ಸ್ವಾಮಿ ಆತ್ಮವಿದಾನಂದ

**ಕೈಗಾರಿಕೋದ್ಯಮವೇ ಪ್ರಧಾನವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಗ್ರಾಮಾಭಿವೃದ್ಧಿಯ ಪ್ರಾಮುಖ್ಯವನ್ನು ಒತ್ತಿ ಹೇಳುತ್ತದೆ ಈ ಲೇಖನ. ರಾಂಚಿಯಲ್ಲಿರುವ ರಾಮಕೃಷ್ಣ ಆಶ್ರಮದ ಮುಖ್ಯಸ್ಥರಾಗಿದ್ದ ಸ್ವಾಮಿ ಆತ್ಮ ವಿದಾನಂದರು ಅಲ್ಲಿ ನಡೆಯುತ್ತಿರುವ ಗ್ರಾಮಾಭಿವೃದ್ಧಿ ಕಾರ್ಯಕ್ರಮದ ರೂವಾರಿಯಾಗಿದ್ದರು. ಈಗ ಅವರು ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವರು.**

ಬಿಹಾರಿನ ರಾಂಚಿ ಜಿಲ್ಲೆಯ ಘಾಗ್ರಾ ಟಿಕ್ರಾ ಟೋಲಿ ಎಂಬ ಹಿಂದುಳಿದ ಆದಿವಾಸಿ ಹಳ್ಳಿಯಲ್ಲಿ ಎಂಟು ಜನರ ಬಡಕುಟುಂಬದ ಆದಿವಾಸಿ ಯುವಕ ಮಾಂಗ್‌ರಾಜ್ ಟೊಪ್ಪೋ. ಈ ಪ್ರದೇಶದ ಆರ್ಥಿಕ ದುಃಸ್ಥಿತಿಯಿಂದಾಗಿ, ಹಳ್ಳಿಯ ಮಕ್ಕಳೆಲ್ಲ ತಮ್ಮ ತಂದೆಯ ಹೊಲದಲ್ಲಿ ಕೆಲಸ ಮಾಡುವಂತೆ ಮಾಂಗ್‌ರಾಜನೂ ದುಡಿಯುತ್ತಿದ್ದ. ಇದ್ದಕ್ಕಿದ್ದಂತೆ ತಂದೆ ಸತ್ತ; ಆಗ ಆತ ಶಾಲೆಯನ್ನು ಬಿಟ್ಟು, ಕುಟುಂಬ ಪೋಷಣೆಗಾಗಿ ತನ್ನ ಅಣ್ಣನೊಡನೆ ಎಲ್ಲ ಸಮಯವನ್ನೂ ವ್ಯವಸಾಯದಲ್ಲೇ ಕಳೆಯಬೇಕಾಯಿತು. ಒಮ್ಮೆ ಅದೃಷ್ಟದಿಂದೆಂಬಂತೆ ಆತನಿಗೆ ರಾಂಚಿಯ ರಾಮಕೃಷ್ಣ ಮಿಷನ್ ಪ್ರಕಟಿಸುವ "ದಿವ್ಯಾಯನ್ ಸಮಾಚಾರ್" ಎಂಬ ಕೃಷಿ ಮಾಸ ಪತ್ರಿಕೆಯ ಪ್ರತಿ ಸಿಕ್ಕಿತು; ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳಲ್ಲಿ ರಾಮಕೃಷ್ಣ ಮಿಷನ್ನಿನವರು ನೀಡುತ್ತಿರುವ ಉಚಿತ ತರಬೇತಿಯ ಬಗ್ಗೆ ತಿಳಿಯಿತು. ತನ್ನ ಕುಟುಂಬದ ಬಡತನದ ನಿವಾರಣೆಗೆ ಆಸೆಯ ಕಿರಣ ಈ ಸುದ್ದಿಯಲ್ಲಿದೆ ಎನಿಸಿತು. ತನ್ನ ಹೊಲದಲ್ಲಿ ಹೆಚ್ಚು ಬೆಳೆ ತೆಗೆಯಲು ಈ ಉಚಿತ ತರಬೇತಿ ಪಡೆಯಲು ಯೋಚಿಸಿ, ಮಾಂಗ್‌ರಾಜ್ ಹಿಗ್ಗಿದ. ದಿವ್ಯಾಯನದಲ್ಲಿ ನೇರ ಅನುಭವದ ಪ್ರಾತ್ಯಕ್ಷಿಕ ತರಬೇತಿಗೆ ಆತ ಸೇರಿಕೊಂಡ. ತರಬೇತಿಯ ನಂತರ ತನ್ನ ವ್ಯವಸಾಯದಲ್ಲಿ ಉತ್ಪಾದನೆ ಹೆಚ್ಚಿಸಲು ಪ್ರಯತ್ನಿಸುತ್ತ, ತನ್ನ ಹಿತ್ತಿಲಲ್ಲಿ ಕೋಳಿ ಸಾಕಣೆ ಪ್ರಾರಂಭಿಸಿದ. ನಿಧಾನವಾಗಿ, ಜೇನು ಸಾಕಣೆಯ ಪೆಟ್ಟಿಗೆ, ಜೇನು ಹಿಂಡು ಇತ್ಯಾದಿಗಳಿಗೆ ಆಗುವಷ್ಟು ಹಣ ಕೂಡಿಸಿದ. ಮಿಷನ್ನಿನವರು ೧೯೮೭ರಲ್ಲಿ ಜೇನು ಸಾಕಣೆಯನ್ನು ಹಳ್ಳಿಗಳಲ್ಲಿ ಪ್ರಾರಂಭಿಸಲು ಸಹಾಯಧನ ಯೋಜನೆಯನ್ನು ತರಲು, ಈ ಕಾರ್ಯಕ್ರಮದಲ್ಲಿ ಸೇರಿ, ತನ್ನ ಹಳ್ಳಿಯಲ್ಲಿ ಜೇನು ಸಾಕಣೆಯನ್ನು ಆರಂಭಿಸಿದ.

ದಿವ್ಯಾಯನದವರ ಎಡೆಬಿಡದ ಅನುಸರಣೆ ಹಾಗೂ ತನ್ನ ನಿರಂತರ ಪ್ರಯತ್ನ, ಪರಿವರ್ತನೆ, ಸ್ಥೈರ್ಯಗಳಿಂದ ಜೇನುಸಾಕಣೆಯಲ್ಲಿ ಅವನು ಮುಂದುವರೆದನು. ಈಗ ಆತ ಜೇನುಸಾಕಣೆಯಿಂದಲೆ ವರ್ಷಕ್ಕೆ ೭೫ರಿಂದ ೮೫ ಸಾವಿರ ರೂ. ಗಳಿಸುತ್ತಿದ್ದಾನೆ. ಇದರ ಜತೆ ಉತ್ತಮ ಕೃಷಿಯಿಂದಾಗಿ ಆದಾಯ ಹೆಚ್ಚುತ್ತ, ಕುಟುಂಬದ ಬಡತನ ಕ್ರಮೇಣ ನಿವಾರಣೆಯಾಗಿದೆ. ಅವನ ಪ್ರಯತ್ನದಿಂದ ಇನ್ನೂ ಇಪ್ಪತ್ತು ಕುಟುಂಬದವರು ಕಡಿಮೆ ಬಂಡವಾಳದ ಉದ್ಯಮವಾಗಿ ಜೇನು ಸಾಕಣೆಯಿಂದ ಈಗ ಸಾಕಷ್ಟು ಆದಾಯ ಪಡೆಯುತ್ತಿದ್ದಾರೆ. ಮಾಂಗ್‌ರಾಜನಲ್ಲಿ ಎಂಥ ಆತ್ಮವಿಶ್ವಾಸ ಮೂಡಿದೆ ಎಂದರೆ, ಈಗ ಅವನು ದಿವ್ಯಾಯನದಲ್ಲಿ ಗ್ರಾಮೀಣ ವಿಸ್ತರಣಾ ಕಾರ್ಯಕ್ರಮದಲ್ಲಿ ಜೇನುಸಾಕಣೆಯ ತರಬೇತುದಾರನಾಗಿದ್ದಾನೆ. ಒಂದು ಸಣ್ಣ ಹಣತೆ (ಮಾಂಗ್‌ರಾಜ್) ಈಗ ದೊಡ್ಡದಾಗಿ ಬೆಳೆದು, ಜನತೆಯ ಆಶೋತ್ತರಗಳ, ಭರವಸೆಯ ಬೆಳಕನ್ನು ಇಡೀ ಪ್ರದೇಶದಲ್ಲಿ ಹರಡುತ್ತಿದೆ. ತನಗೆ ಶಿಕ್ಷಣ ಪಡೆಯಲು ಸಾಧ್ಯವಾಗದಿದ್ದರೂ ಮಾಂಗ್‌ರಾಜ್ ತನ್ನ ಸಹೋದರ ಸಹೋದರಿಯರು ಸುಶಿಕ್ಷಿತರಾಗಿ, ಸ್ನಾತಕೋತ್ತರ ಹಂತ ತಲುಪಲು ಸಹಾಯ ಮಾಡಿದ್ದಾನೆ. ಮಾಂಗ್‌ರಾಜ್‌ನ ನೇತೃತ್ವದಲ್ಲಿನ ಯುವಕರು ಆದಿವಾಸಿಗಳ ಪ್ರಧಾನ ದೌರ್ಬಲ್ಯವಾದ ಕಳ್ಳಭಟ್ಟಿ ಸಾರಾಯಿ ಕುಡಿಯುವುದನ್ನು ಬಿಡಲು

**ಶೀರ್ಷಿಕೆಯ ಚಿತ್ರ**

***ರಾಂಚಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿರುವ ಶ್ರೀರಾಮಕೃಷ್ಣರ ಮಂದಿರ***

ಸುತ್ತಮುತ್ತಲ ಹಳ್ಳಿಯವರನ್ನು ಪ್ರೇರಿಸಿದ್ದಾರೆ. ಗ್ರಾಮದಲ್ಲೇ ಈಗ ಸಾಕಷ್ಟು ಉದ್ಯೋಗ ಲಭ್ಯವಾಗಿ, ಹಳ್ಳಿಯ ಯುವಕರು ಕೆಲಸವಿಲ್ಲದ ದಿನಗಳಲ್ಲಿ ಪಟ್ಟಣಗಳಿಗೆ ವಲಸೆ ಹೋಗುವುದು ತಪ್ಪಿದೆ. ಘಾಗ್ರಾ ಟಿಕ್ರ ಟೋಲಿಯು ರಾಮಕೃಷ್ಣ ಮಿಷನ್ನಿನ ದತ್ತುಗ್ರಾಮಗಳಲ್ಲಿ ಒಂದಾಗಿ, ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ಉನ್ನತಿಯ ಹೊಸ ಶಕೆಯನ್ನು ಆರಂಭಿಸಿದೆ.

ಗೆಲವು, ನಿರೀಕ್ಷೆ, ಹಾಗೂ ಜೀವನ ಪೋಷಣೆಯ ಅನೇಕ ಪ್ರಸಂಗಗಳಲ್ಲಿ ಮೇಲಿನ ಕತೆಯೂ ಒಂದು. ರಾಂಚಿಯ ದಿವ್ಯಾಯನದ (ದಿವ್ಯ ಯಾತ್ರೆಯ ಎಂದು ಅರ್ಥ) ಮೌನವಾದ ಆದರೆ ಪರಿಣಾಮ ಕಾರಿಯಾದ ಕೆಲಸದಿಂದ ಇಂತಹ ಆಶ್ಚರ್ಯಕರ ಅಭಿವೃದ್ಧಿಯು ಸಾಧ್ಯ ವಾಗಿದೆ. ರಾಮಕೃಷ್ಣ ಮಿಷನ್ನಿನವರು ಕೈಗೊಂಡ ಇಂತಹ ಅನೇಕ ಕಾರ್ಯಕ್ರಮಗಳ ಹಿಂದಿನ ಪ್ರೇರಣೆ, ಸ್ಫೂರ್ತಿಯನ್ನು ನಾವು ಗಮನಿಸಿದರೆ, ನಮ್ಮ ದೇಶದ ಪುನರುತ್ಥಾನದ ಬಗೆಗೆ ಪ್ರವಾದಿಸದೃಶ ಕಾಣ್ಕೆಯನ್ನು ಹೊಂದಿದ್ದ ಸ್ವಾಮಿ ವಿವೇಕಾನಂದರೇ ಅತಿ ವಿವರವಾಗಿ ಇಂಥ ಕಾರ್ಯಕ್ರಮಗಳನ್ನು ಯೋಜಿಸಿದ್ದರೆಂಬುದು ಗೊತ್ತಾಗುತ್ತದೆ.

ನಮ್ಮ ದೇಶದ ಕೃಷಿಯ ಅಭಿವೃದ್ಧಿಯ ಬಗ್ಗೆ, ಗ್ರಾಮೀಣ ವಿಸ್ತರಣಾ ಕಾರ್ಯಕರ್ತನಲ್ಲಿರಬೇಕಾದ ಅಗತ್ಯ ಗುಣಗಳ ಬಗ್ಗೆ ಸ್ವಾಮೀಜಿಯ ಯೋಚನೆಯನ್ನು ನಾವು ಈ ಕೆಳಗಿನ ಹೇಳಿಕೆಯಿಂದ ಅರಿತುಕೊಳ್ಳಬಹುದು :

"ಕೃಷಿಯನ್ನು ಯಾರಾದರೂ ತನ್ನ ವೃತ್ತಿಯನ್ನಾಗಿಸುವುದರಲ್ಲಿ ತೊಂದರೆಯಿದೆಯೆಂದು ನನಗೇನೂ ಅನ್ನಿಸುವುದಿಲ್ಲ; ಆದರೆ, ನೀವು ಯಾರಿಗಾದರೂ ಅಂಥ ಸಲಹೆ ನೀಡಿದರೆ, ಆತ 'ಹಾಗಾದರೆ ನಾನು ಯಾಕೆ ಇಷ್ಟು ಶಿಕ್ಷಣ ಪಡೆದದ್ದು? ದೇಶದ ಎಲ್ಲರೂ ಕೃಷಿಕರಾಗ ಬೇಕೆಂಬ ಆವಶ್ಯಕತೆ ಇದೆಯೇನು? ಈಗಾಗಲೇ ಕೃಷಿಕರಿಂದ ದೇಶ ತುಂಬಿಹೋಗಿದೆ—ಆದ್ದರಿಂದಲೇ ಅದು ಇಂತಹ ಹೀನಸ್ಥಿತಿಗೆ ಬಂದಿದೆ' ಎಂದು ನಿಮ್ಮ ಮೇಲೆಯೇ ಹರಿಹಾಯ್ದಾನು. ಆದರೆ ಇದು ಹಾಗೆ ಇಲ್ಲ. ಮಹಾಭಾರತವನ್ನು ಓದಿ. ಋಷಿ ಜನಕನು ಒಂದು ಕೈಯಲ್ಲಿ ನೇಗಿಲು ಹಿಡಿದು ಇನ್ನೊಂದು ಕೈಯನ್ನು ಉಪಯೋಗಿಸಿ ವೇದಗಳನ್ನು ಓದಿದನು. ಪ್ರಾಚೀನ ಋಷಿಮುನಿಗಳೆಲ್ಲರೂ ರೈತರು. ಅಷ್ಟೇ ಅಲ್ಲ, ಅಮೆರಿಕ ತನ್ನ ಕೃಷಿಯನ್ನು ಅಭಿವೃದ್ಧಿಗೊಳಿಸಿ ಎಷ್ಟೊಂದು ಮುಂದುವರೆದಿದೆ ಎಂಬುದನ್ನು ನೋಡಿ. .... ಆದರೆ ಈ ದಿನಗಳಲ್ಲಿ ಒಂದೆರಡು ಇಂಗ್ಲಿಷ್ ಪುಸ್ತಕಗಳನ್ನು ಓದಲು ಕಲಿತ ಹಳ್ಳಿಯ ಹುಡುಗರು ಕೂಡಲೆ ಪಟ್ಟಣಗಳಿಗೆ ಓಡುವರು. ಹಳ್ಳಿಯಲ್ಲಿ ಅವರಿಗೆ ಬೇಕಾದಷ್ಟು ಜಮೀನು ಇದೆ; ಆದರೆ ಅದರಿಂದ ಅವರಿಗೆ ತೃಪ್ತಿ ಇಲ್ಲ. ಅವರಿಗೆ ಪಟ್ಟಣದ ಸುಖ ಜೀವನ ಬೇಕು, ಚಾಕರಿ ಸೇರಬೇಕು. ಇದರಿಂದಾಗಿಯೇ ಇತರ ಜನಾಂಗದವರಂತೆ ಹಿಂದೂಗಳು ಅಭಿವೃದ್ಧಿ ಹೊಂದಲಿಲ್ಲ.... ಶಿಕ್ಷಿತರು ಹಳ್ಳಿಗಳಿಗೆ ಹೋಗಿ ನೆಲೆಸಿದರೆ, ಸಣ್ಣ ಹಳ್ಳಿಗಳೂ ಅಭಿವೃದ್ಧಿ ಹೊಂದುವುವು. ವೈಜ್ಞಾನಿಕವಾಗಿ ಕೃಷಿ ಮಾಡಿದರೆ ಬೆಳೆ ಹೆಚ್ಚುತ್ತದೆ. ಈ ರೀತಿಯಲ್ಲಿ ತಮ್ಮ ಕಸುಬಿನ ಬಗ್ಗೆ ರೈತರು ಪ್ರಜ್ಞಾವಂತರಾಗುವರು, ಎಚ್ಚೆತ್ತುಕೊಳ್ಳುವರು; ಅವರ ಬುದ್ಧಿಮಂತಿಕೆ ಬೆಳೆಯುವುದು; ಹೆಚ್ಚಿನದು ಮತ್ತು ಉತ್ತಮವಾದುದನ್ನು ಅವರು ಕಲಿಯುವರು... ಇದರ ಮೂಲಕ ಇಂದು ನಮಗೆ ಅತ್ಯಂತ ಅವಶ್ಯವಾದ ಸಮೂಹ ಶಿಕ್ಷಣ, ಕೆಳಜಾತಿಯವರಿಗೆ ಅತ್ಯುನ್ನತ ಸತ್ಯಗಳನ್ನು ಬೋಧಿಸುವುದು, ಪರಸ್ಪರ ಪ್ರೀತಿ ಮತ್ತು ಅನುಭೂತಿ —ಇವುಗಳನ್ನೂ ಸಾಧಿಸಬಹುದು .... ಹಳ್ಳಿಯವರ ಜೊತೆ ಬೆರೆತರೆ ಗೊತ್ತಾಗುತ್ತದೆ, ಸುಶಿಕ್ಷಿತರ ಸಂಗಕ್ಕೆ ಅವರೆಷ್ಟು ಹಾತೊರೆಯುತ್ತಿರುವ ರೆಂಬುದು! ಜ್ಞಾನದಾಹ ಎಲ್ಲರಲ್ಲೂ ಇದೆ. ಆದಕ್ಕೆ ಶಿಕ್ಷಿತನ ಸಂಗ ಲಭಿಸಿದಾಗ, ಅವನ ಸುತ್ತ ಕುಳಿತು ಅವರು ಅವನು ಹೇಳುವು ದನ್ನೆಲ್ಲಾ ಏಕಾಗ್ರತೆಯಿಂದ ಕೇಳುವರು. ಹಳ್ಳಿಗರ ಈ ಪ್ರವೃತ್ತಿಯ ಲಾಭ ಪಡೆದು ಶಿಕ್ಷಿತರು ಅವರನ್ನು ಪ್ರತಿಸಂಜೆ ತಮ್ಮ ಮನೆಗೆ ಕರೆದು, ಕತೆಗಳು, ಪ್ರಸಂಗಗಳ ಸಹಾಯದಿಂದ ಶಿಕ್ಷಣ ನೀಡಿದರೆ— ಅಂತಹ ಒಂದು ರಾಷ್ಟ್ರೀಯ ಚಳುವಳಿಯಿಂದ ಒಂದು ಸಾವಿರ ವರ್ಷಗಳಲ್ಲಿ ಸಾಧಿಸುವಷ್ಟನ್ನು ಹತ್ತೇ ವರ್ಷದಲ್ಲಿ ನಾವು ಸಾಧಿಸ ಬಹುದು."

ಭಾರತದ ಕಾರ್ಯರಂಗದಲ್ಲಿ ಈ ಹೇಳಿಕೆ ಬಹಳ ಮಹತ್ತ್ವ ವಾದುದು. ನಮ್ಮ ಹಿಂದಿನ ಆಡಳಿತಗಾರರಿಗೆ ಉತ್ಪಾದನೆ ಹೆಚ್ಚಿಸಲು ಅವಶ್ಯ ತಾಂತ್ರಿಕತೆಯನ್ನು ನೀಡಿ ರೈತರನ್ನು ಉತ್ತಮ ರೈತರನ್ನಾಗಿಸ ಬೇಕೆಂಬ ಕಲ್ಪನೆ ಇರಲಿಲ್ಲ. ಶತಮಾನದ ಹಿಂದೆಯೇ ಈ ಸಮಸ್ಯೆಯ ಬಗ್ಗೆ ಸ್ವಾಮೀಜಿ ಯೋಚಿಸಿದ್ದರೆಂಬುದು ಅವರ ವೈಜ್ಞಾನಿಕ ದೃಷ್ಟಿ, ಸಾಮರ್ಥ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ. ದಿವ್ಯಾಯನವು ಭಾರತದ ಈ ಭಾಗದಲ್ಲಿ ಬಡರೈತರಿಗೆ ಅವಶ್ಯವಿರುವ ತಾಂತ್ರಿಕತೆ ಯನ್ನು ನೀಡಿ ಉತ್ಪಾದನೆಯನ್ನು ಹೆಚ್ಚಿಸುವ ಒಂದು ಪ್ರಕ್ರಿಯೆ ಯನ್ನು ಪ್ರಾರಂಭಿಸಿದೆ. ಇದು ಕೃಷಿ ವಿಸ್ತರಣೆಯ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಕೃಷಿವಿಜ್ಞಾನ ಕೇಂದ್ರವೂ ರಾಂಚಿಯಲ್ಲಿನ ಕೆಲಸದಿಂದ ಕೆಲವು ಅಂಶಗಳನ್ನು ಪಡೆದಿದೆ.

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಸಂಘದ ನಿಯಮಾವಳಿಗಳನ್ನು ರಚಿಸುವ ಸಂದರ್ಭದಲ್ಲಿ ಹಜಾರಿಬಾಗ್ ಒಂದು ಕಾರ್ಯಕ್ಷೇತ್ರವೆಂದು ಆಶ್ಚರ್ಯಕರವಾಗಿ ಊಹಿಸಿದ್ದರು: "ಮಧ್ಯಭಾರತದ ಹಜಾರಿಬಾಗ್‌ನಂತಹ ಜಿಲ್ಲೆಗಳಲ್ಲಿ ಫಲವತ್ತಾದ, ನೀರೂ ಸಮೃದ್ಧವಾಗುಳ್ಳ ಭೂಮಿ ಸುಲಭ ಬೆಲೆಯಲ್ಲಿ ಬೇಕಾದಷ್ಟು ಸಿಕ್ಕುತ್ತದೆ. ವಿಶಾಲ ಭೂಮಿಯನ್ನು ಖರೀದಿಸಿ ಅಲ್ಲಿ ದೊಡ್ಡ ತಾಂತ್ರಿಕ ವಿದ್ಯಾಲಯವನ್ನೂ ಅನಂತರ ಸ್ವಲ್ಪ ನಿಧಾನವಾಗಿ ಕೈಗಾರಿಕೆ ಗಳನ್ನೂ ಪ್ರಾರಂಭಿಸಬೇಕು. ಆಹಾರಧಾನ್ಯ ಬೆಳೆಯುವ ಹೊಸ ವಿಧಾನಗಳನ್ನು ಸಂಶೋಧಿಸಿ; ಆ ಕಾಲೋನಿಯಲ್ಲಿ ಜನ ನೆಲೆ ನಿಲ್ಲುವರು. ಅನಂತರ ನಿಮಗೆ ಬೇಕಾದಂತೆ ಅವರನ್ನು ತಿದ್ದಿ ಕೊಳ್ಳಬಹುದು."

ಸ್ವಾಮೀಜಿಯವರ ಕಾಣ್ಕೆಯನ್ನು ನನಸಾಗಿಸುವಂತೆ ಹಜಾರಿ ಬಾಗ್‌ನ ಪಕ್ಕದ ರಾಂಚಿ ಜಿಲ್ಲೆಯಲ್ಲಿ ದಿವ್ಯಾಯಾನ ಕೃಷಿ ವಿಜ್ಞಾನ ಕೇಂದ್ರವು ಸ್ಥಾಪಿತವಾಗಿ, ಆಹಾರ ಬೆಳೆಯುವಲ್ಲಿ ಹೊಸ ವಿಧಾನಗಳು ಅಭಿವೃದ್ಧಿಗೊಳ್ಳುತ್ತಲಿವೆ. ಘಾಗ್ರಾ ಟಿಕ್ರಾ ಟೋಲಿಯಂತಹ ಅನೇಕ ಹಳ್ಳಿಗಳನ್ನು ವಿವೇಕಾನಂದ ಸೇವಾ ಸಂಘಗಳು ದತ್ತು ತೆಗೆದುಕೊಂಡಿವೆ; ಬಡ ಹಳ್ಳಿಗರ ಬುದ್ಧಿ-ಹೃದಯ-ಕೈಗಳನ್ನು ಬೆಳೆಸಿ, ಸರ್ವತೋಮುಖ ಪ್ರಗತಿಗೆ ಪ್ರಯತ್ನಿಸುತ್ತಿವೆ.

ನಮ್ಮ ಸಂಘವಿರುವುದು ಅನಾಥರಿಗೆ, ದೀನರಿಗೆ, ನಿರಕ್ಷರಸ್ಥರಾದ ಬೇಸಾಯಗಾರರಿಗೆ ಮತ್ತು ಕೂಲಿಕಾರರಿಗೆ. ಮೊದಲು ಅವರಿಗೆ ಎಲ್ಲವನ್ನೂ ಮಾಡಿ ಆದಮೇಲೆ ಸಮಯ ಸಿಕ್ಕಿದರೆ ನಂತರ ಮೇಲು ವರ್ಗದವರಿಗೆ.

—ಸ್ವಾಮಿ ವಿವೇಕಾನಂದ

ಹೊರಗಿನ ಸೇವಾಸಂಘಗಳು ಅಭಿವೃದ್ಧಿಪಡಿಸುವ ಹೆಸರಲ್ಲಿ ಎಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಟ್ಟು, ಸಾಮೂಹಿಕ ಅವಲಂಬನೆ ಬೆಳೆಸುವುದನ್ನು ಸ್ವಾಮೀಜಿ ಒಪ್ಪುತ್ತಿರಲಿಲ್ಲ. ಸ್ವ ಸಹಾಯ ಗುಂಪುಗಳನ್ನು ಸಂಘಟಿಸಿ, ಜನರೇ ತಮ್ಮ ಶಿಕ್ಷಣ, ಆರ್ಥಿಕ ಆಡಳಿತಗಳನ್ನು ನಿರ್ವಹಿಸಲು ಕಲಿಸಬೇಕೆಂಬುದು ಅವರ ಅಭಿಪ್ರಾಯ. ಅವರು ಭಾಗಲ್ಪುರದಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಗುರುಭಾಯಿ ಅಖಂಡಾನಂದರಿಗೆ ಹೀಗೆ ಬರೆದಿದ್ದರು :

"ಕೆಲವು ರೈತ ಬಾಲಕ ಬಾಲಕಿಯರಿಗೆ ಸ್ವಲ್ಪ ಓದು ಬರಹವನ್ನು ಕಲಿಸಿ, ಕೆಲವು ಪ್ರಾಥಮಿಕ ವಿಷಯಗಳನ್ನು ಅವರ ತಲೆಗೆ ತುಂಬು. ನಂತರ ಪ್ರತಿ ಹಳ್ಳಿಯ ರೈತರೂ ಕೂಡ ಚಂದಾ ಎತ್ತಿ ತಮ್ಮ ಹಳ್ಳಿಯಲ್ಲಿ ತಮ್ಮದೇ ಆದ ಇಂತಹ ಶಾಲೆ ತೆರೆಯುವರು. ಉದ್ಧರೇದಾತ್ಮನಾತ್ಮಾನಂ—'ತನ್ನಿಂದ ತಾನೇ ಉದ್ಧಾರ ಆಗ ಬೇಕು.' ಇದು ಎಲ್ಲ ಕ್ಷೇತ್ರಕ್ಕೂ ಸಲ್ಲುತ್ತದೆ. ತಮಗೆ ತಾವೇ ಸಹಾಯ ಮಾಡಿಕೊಳ್ಳಲು ನಾವು ಸಹಾಯ ಮಾಡುವುದು... ತಮ್ಮ ಸ್ಥಿತಿಯನ್ನು ತಾವೇ ಎಂದು ತಿಳಿದುಕೊಳ್ಳುತ್ತಾರೋ, ಸಹಾಯ ಮತ್ತು ಸುಧಾರಣೆಯ ಆವಶ್ಯಕತೆಯನ್ನು ಎಂದು ತಿಳಿಯುವರೋ ಅಂದೇ ನಿನ್ನ ಕೆಲಸ ಪರಿಣಾಮಕಾರಿಯಾಗುತ್ತಿದೆ, ಸರಿಯಾದ ದಾರಿಯಲ್ಲಿ ಇದೆ ಎಂದು ತಿಳಿ."

ಶಿಕ್ಷಣದ ವಿಧಾನದ ಬಗ್ಗೆ ಅವರು ಹೀಗೆಂದರು : "ಒಂದು ವೇಳೆ ಬಡವರಿಗೆಂದೇ ಭಾರತದಲ್ಲೆಲ್ಲಾ ನೀವು ಶಾಲೆಗಳನ್ನು ತೆರೆದರೂ, ಅವರಿಗೆ ಶಿಕ್ಷಣ ನೀಡಲಾರಿರಿ. ಅದು ನಿಮಗೆ ಹೇಗೆ ತಾನೇ ಸಾಧ್ಯವಾದೀತು? ಶಾಲೆಗೆ ಬರುವುದಕ್ಕಿಂತ, ನಾಲ್ಕು ವರ್ಷದ ಬಾಲಕನು ಬೇಸಾಯಕ್ಕೆ ಅಥವಾ ಇನ್ನೇನಾದರೂ ಕೂಲಿ ಕೆಲಸ ಮಾಡುವುದಕ್ಕೇ ಇಷ್ಟಪಡುತ್ತಾನೆ. ನಿಮ್ಮ ಶಾಲೆಗೆ ಅವನು ಬರಲಾರ; ಅದು ಅಸಾಧ್ಯ. ತನ್ನನ್ನು ಉಳಿಸಿಕೊಳ್ಳುವುದು ಮೊದಲ ಪ್ರವೃತ್ತಿ. ಬೆಟ್ಟ ಮಹಮ್ಮದನ ಬಳಿ ಬಾರದಿದ್ದರೆ, ಮಹಮ್ಮದನೇ ಬೆಟ್ಟದ ಬಳಿಗೆ ಹೋಗಬಹುದು. ನನ್ನ ಪ್ರಕಾರ ಶಿಕ್ಷಣವು ಮನೆ ಬಾಗಿಲಿಗೆ ಏಕೆ ಹೋಗಬಾರದು ಎಂಬುದೇ ಪ್ರಶ್ನೆ. ಉಳುವವನ ಮಕ್ಕಳು ಶಾಲೆಗೆ ಬಾರದಿದ್ದರೆ, ನೀವೇ ಆತ ಉಳುವಲ್ಲಿಗೆ, ಕಾರ್ಖಾನೆಗೆ ಅಥವಾ ಅವನು ಎಲ್ಲಿರುವನೋ ಅಲ್ಲಿಗೆ ಹೋಗಿ ಶಿಕ್ಷಣ ನೀಡಬಾರದೇಕೆ?"

ಗ್ರಾಮೀಣ ಅಭಿವೃದ್ಧಿಯ ವಿಧಾನದ ಬಗ್ಗೆ ಸ್ವಾಮೀಜಿಯವರ ಅಭಿಪ್ರಾಯಗಳಿವು ಎನ್ನಬಹುದು :

೧. ಗ್ರಾಮೀಣ ಪ್ರದೇಶದಲ್ಲಿ ಒಂದು ಕೇಂದ್ರ ಸ್ಥಾಪನೆ.

೨. ಕೌಶಲ್ಯದ ಅಭಿವೃದ್ಧಿ, ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಉತ್ಪಾದನೆಯ ಹೆಚ್ಚಳಕ್ಕಾಗಿ ಈ ಕೇಂದ್ರ ಕೆಲಸ ಮಾಡಬೇಕು.

೩. ಜನರು ಅಲ್ಲಿ ನೆಲೆಗೊಳ್ಳುವಂತೆ, ಉತ್ತಮ ಗುಣಮಟ್ಟದ ಜೀವನದ ಬಗ್ಗೆ, ಉನ್ನತ ಆದರ್ಶಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳುವಂತೆ ಆ ಕೇಂದ್ರವು ಸ್ಫೂರ್ತಿ ನೀಡಬೇಕು.

೪. ಕೆಳಗೆ ತಳ್ಳಲ್ಪಟ್ಟ ಜನರನ್ನೇ ಕೇಂದ್ರವು ತನ್ನ ಮುಖ್ಯ ಗುರಿಯನ್ನಾಗಿಸಬೇಕು.

೫. ಹಳ್ಳಿಗಳಲ್ಲಿ ಸ್ವಸಹಾಯ ತಂಡಗಳನ್ನು ರೂಪಿಸುವುದು.

೬. ಕಲಿಯುವಿಕೆ ಮತ್ತು ಕೌಶಲ್ಯದ ಅಭಿವೃದ್ಧಿಯಿಂದ ಕೃಷಿ ವಿಸ್ತರಣೆ.

೭. ಶಿಕ್ಷಣವನ್ನು ಜನರತ್ತ ಒಯ್ಯುವುದು.

೮. ಹಳ್ಳಿಗಳಿಂದಲೇ ಶಿಕ್ಷಕರು ನಿರ್ಮಾಣಗೊಳ್ಳಬೇಕು.

೯. ಶಿಕ್ಷಣದಲ್ಲಿ ಅನೌಪಚಾರಿಕ ವಿಧಾನಗಳ ಬಳಕೆ.

ಸ್ವಾಮೀಜಿಯವರ ಈ ಆಣತಿಗಳನ್ನು ದಿವ್ಯಾಯನದಲ್ಲಿ ಅಕ್ಷರಶಃ ಅಳವಡಿಸಿಕೊಳ್ಳಲಾಗಿದೆ. ದಿವ್ಯಾಯನದ ಪೂರ್ಣ ಕಾರ್ಯಕ್ರಮವನ್ನು ೧೭ನೇ ಪುಟದಲ್ಲಿರುವ ಪಟ್ಟಿಯಿಂದ ತಿಳಿಯಬಹುದು. ಈ ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಮೊದಲು ಹೇಳಿದ ಮಾಂಗ್‌ರಾಜ್‌ನ ಕತೆ ಒಂದು ಉದಾಹರಣೆ ಮಾತ್ರ. ಇದು ಕಾರ್ಯಸಾಧ್ಯವಾಗಲು ವೈಜ್ಞಾನಿಕ ಉದ್ಯೋಗಿಗಳು, ವಿಸ್ತರಣಾ ಕೆಲಸಗಾರರು, ಗ್ರಾಮಮಟ್ಟದ ಸೇವಾ ಸಂಘಗಳ ಕಾರ್ಯಕರ್ತರು ಒಗ್ಗಟ್ಟಾಗಿ, ಪರಸ್ಪರ ತಿಳುವಳಿಕೆಯಿಂದ, ಸಂನ್ಯಾಸಿಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡಿರುವುದೇ ಕಾರಣ.

ಪುಸ್ತಕದ ತಿಳುವಳಿಕೆಗಿಂತ ಕೆಲಸದ ಮೂಲಕ ಕಲಿಯುವ ಕ್ರಮದಿಂದ, ಕೌಶಲ್ಯವನ್ನು ಬೆಳೆಸುವ ವಿಧಾನದಿಂದ ದಿವ್ಯಾಯನದಲ್ಲಿ ತರಬೇತಿ ನೀಡಲಾಗುತ್ತದೆ. ಗುರುಕುಲದಂತೆ ಇಲ್ಲಿ ಶಿಬಿರಾರ್ಥಿಗಳು ಆಶ್ರಮದ ಶುದ್ಧ ವಾತಾವರಣದಲ್ಲಿ ಸಂನ್ಯಾಸಿಗಳೊಂದಿಗೆ ವಾಸಿಸುತ್ತಾರೆ. ಇದು ಪರೋಕ್ಷವಾಗಿ ಜೀವನದ ಉನ್ನತ-ಆದರ್ಶಗಳನ್ನು ಅವರಲ್ಲಿ ಬೆಳೆಸುತ್ತಿದೆ. ಏನೇ ಆದರೂ, ಪುನಃ ಪುನಃ ಅನುಸರಣೆ ಮಾಡದಿದ್ದರೆ ಅತ್ಯುತ್ತಮ ತರಬೇತಿಯೂ ವ್ಯರ್ಥ. ದಿವ್ಯಾಯನದ ವಿಸ್ತರಣಾ ಕಾರ್ಯಕ್ರಮದಲ್ಲಿ ವೈಜ್ಞಾನಿಕ ಉದ್ಯೋಗಿಗಳೂ, ವಿಸ್ತರಣಾ ಕೆಲಸಗಾರರೂ ಹತ್ತು ಗ್ರಾಮಗಳನ್ನು ಕ್ರಮವಾಗಿ ಆಗಾಗ್ಗೆ ಸಂಪರ್ಕಿಸುತ್ತಾ ಇದ್ದು ರೈತರಿಗೆ ಆತ್ಮವಿಶ್ವಾಸ ತುಂಬಿ ಉತ್ಪಾದನೆಯಲ್ಲಿ ವೈಜ್ಞಾನಿಕ ವಿಧಾನಗಳನ್ನು ಬಳಸಲು ಪ್ರೋತ್ಸಾಹಿಸುತ್ತಾರೆ. **ವಿವೇಕಾನಂದ ಸೇವಾ ಸಂಘ** ಎಂಬ ಹೆಸರಿನ ಸ್ವಸಹಾಯ ತಂಡಗಳು ಸುಮಾರು ಎಪ್ಪತ್ತು ಹಳ್ಳಿಗಳಲ್ಲಿ ಆಯಾ ಹಳ್ಳಿಯ ನಾಯಕರನ್ನು ಹೊಂದಿದ್ದು ಸ್ವತಃ ಭಾಗಿಯಾಗುವ ವಿಧಾನದಿಂದ ಸರ್ವಾಂಗೀಣ ಪ್ರಗತಿಯ ಯೋಜನೆಯ ಕೆಲಸಗಳನ್ನು ನಿರ್ವಹಿಸುತ್ತವೆ. ಹಳ್ಳಿಯ ಅಶಿಕ್ಷಿತ ರೈತರ ಪರಸ್ಪರ ವಿಶ್ವಾಸ, ಒಗ್ಗಟ್ಟು, ಕ್ರಮಬದ್ಧವಾಗಿ

# ದಿವ್ಯಾಯನದ ಕಾರ್ಯಕ್ರಮಗಳು



ಕಿಸಾನ್ ಮೇಳ



ರೈತ ಉಪಕರಣಗಳ ತರಬೇತಿ



ಸಮುದಾಯ ಕೇಂದ್ರ



ಅನೌಪಚಾರಿಕ ಶಿಕ್ಷಣ ಶಾಲೆ

## ರಾಂಚಿ ಆಶ್ರಮದ ಕಾರ್ಯಕ್ರಮಗಳು

### ಸಾಂಸ್ಕೃತಿಕ ಮತ್ತು ಶೈಕ್ಷಣಿಕ

ಗ್ರಂಥಾಲಯ
ವಾಚನಾಲಯ
ಯುವ ಸಮ್ಮೇಳನ
ರಾಷ್ಟ್ರೀಯ ಯುವದಿನ
ಸಾಹಿತ್ಯ ಸ್ಪರ್ಧೆಗಳು
ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ವಿಕ್ರಯ
ಸ್ವಾಮಿ ವಿವೇಕಾನಂದ ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಕುರಿತ ಶಾಶ್ವತ ಪ್ರದರ್ಶನ

### ಆಧ್ಯಾತ್ಮಿಕ

ಅನುದಿನದ ಪೂಜೆ, ಪ್ರಾರ್ಥನೆ ಭಕ್ತಿಸಂಗೀತ
ವಿಶೇಷ ತಿಥಿಪೂಜೆಗಳು
ರಾಮನಾಮ ಸಂಕೀರ್ತನೆ
ಆಧ್ಯಾತ್ಮಿಕ ಮಹಾಪುರುಷರ ಜಯಂತಿಗಳ ಆಚರಣೆ
ಸಾಪ್ತಾಹಿಕ ಉಪನ್ಯಾಸಗಳು
ವಿಶೇಷ ಉಪನ್ಯಾಸಗಳು
ಭಕ್ತ ಸಮ್ಮೇಳನ
ಗುರುಪೂರ್ಣಿಮೆ

### ಗ್ರಾಮೀಣ ಅಭಿವೃದ್ಧಿ

#### ೧. ದಿವ್ಯಾಯನದಲ್ಲಿ

ಸಂಯುಕ್ತ ತರಬೇತಿ (ಆರು ವಾರದ್ದು)
ವಿಶೇಷ ತರಬೇತಿಗಳು : ಕೃಷಿ ವಿದ್ಯೆ (೩ ತಿಂಗಳು) ತೋಟಗಾರಿಕೆ (೩ ತಿಂಗಳು), ಕೋಳಿಸಾಕಣೆ (೩ತಿಂಗಳು), ಹೈನುಗಾರಿಕೆ (೩ ತಿಂಗಳು), ರೈತ ಉಪ ಕರಣಗಳು (೩ ತಿಂಗಳು) , ಮರಗೆಲಸ (೬ ತಿಂಗಳು) ಬೆಸುಗೆ ಕೆಲಸ (೩ ತಿಂಗಳು) ,ಲೇತ್-ಯಂತ್ರ ತಜ್ಞತೆ (೧ ವರ್ಷ) , ಜೇನು ಸಾಕಣೆ (೧ ತಿಂಗಳು)
ಅಣಬೆ ವ್ಯವಸಾಯ ಮತ್ತು ಅಲ್ಪಕಾಲದ ತರಬೇತಿಗಳು
ಮಾಸಿಕ ಸಭೆಗಳು ಸೇವಾಸಂಘ/ಕಾರ್ಯಕರ್ತರ ಕಾರ್ಯಾನುಸರಣೆ
ವಾರ್ಷಿಕ ಹಳೆ ತರಬೇತಿ ವಿದ್ಯಾರ್ಥಿಗಳ ಸಮ್ಮೇಳನ
ದಿವ್ಯಾಯನ್ ಸಮಾಚಾರ್ (ಹಿಂದೀ ಮಾಸಪತ್ರಿಕೆ)
ಮಣ್ಣು ಪರೀಕ್ಷೆ

#### ೨. ಹಳ್ಳಿಗಳಲ್ಲಿ

ಒಂದು ದಿನದ ತರಬೇತಿ ಕಾರ್ಯಕ್ರಮ, ವಿವೇಕಾನಂದ ಸೇವಾ ಸಂಘಗಳ ಸಂಘಟನೆ, ಕ್ಷೇತ್ರ ದಿನಗಳು, ದೃಶ್ಯ-ಶ್ರಾವ್ಯ ಕಾರ್ಯಕ್ರಮಗಳು,ಗ್ರಾಮೀಣ ರಾತ್ರಿ ಶಾಲೆಗಳು, ಕ್ಷೇತ್ರ ಪದ್ಧತಿಗಳ ಸಂಶೋಧನೆ/ವಿಸ್ತರಣೆ, ರೈತರ ವಿನಿಮಯ ಕಾರ್ಯಕ್ರಮ ಸಾಮಾಜಿಕ ಅರಣ್ಯ/ತೋಪುಗಳ ಅಭಿವೃದ್ಧಿ, ರೈತರ ಭೂಮಿಗಳಲ್ಲಿ ಪ್ರಾತ್ಯಕ್ಷಿಕೆ
ತೆರೆಬಾವಿ/ಕೊಳವೆ ಬಾವಿ ನಿರ್ಮಾಣ, ಅಂತರರಾಜ್ಯ ಪ್ರವಾಸ
ನೀರೆತ್ತುವ ಕೊಳಗಳು/ಏತ ನೀರಾವರಿ ಯೋಜನೆ,ಉಚಿತ ವೈದ್ಯಕೀಯ ಶಿಬಿರ
ಹಿಪ್ಪು ನೇರಳೆ/ಗೂಂಡೆ ರೇಷ್ಮೆ ಹುಳುಗಳ ವ್ಯವಸಾಯ/ ಎಳೆ ತೆಗೆಯುವಿಕೆ, ಸಮುದಾಯ ಕೇಂದ್ರ, ಕಿಸಾನ್ ಮೇಳಗಳು, ಬಂಜರುಭೂಮಿಯ ಬೆಳವಣಿಗೆ ವ್ಯವಸಾಯಕ್ಕೆ ಬೇಕಾಗುವ ಸಾಮಗ್ರಿ ವಿತರಣೆ/ಉತ್ಪಾದನೆಯ ಮಾರಾಟ, ನಾಬಾರ್ಡ್ ಬ್ಯಾಂಕಿನ ಸಾಲ ಯೋಜನೆ, ಸ್ತ್ರೀಯರ ಸಶಕ್ತೀಕರಣ, ನೀರು ಚರಂಡಿ ಯೋಜನೆ/ನೀರಿಂದ ಬರುವ ರೋಗಗಳ ನಿಯಂತ್ರಣ ಬಯೋಗ್ಯಾಸ್ ಉತ್ಪಾದಕ/ಹೊಗೆಯಿರದ ಒಲೆಗಳು /ಅಭಿವೃದ್ಧಿ ಪಡಿಸಿದ ಒಲೆಗಳು/ ನೈರ್ಮಲ್ಯ ಉಪಕರಣಗಳು, ಕಡಿಮೆ ಬೆಲೆಯ ಕಕ್ಕಸು/ಸೌರಶಕ್ತಿ ದೀಪ

### ಆರೋಗ್ಯರಕ್ಷಣೆ

ಉಚಿತ ಹೋಮಿಯೋಪತಿ ಔಷಧ ವಿತರಣೆ
ಹೊರರೋಗಿಗಳಿಗೆ ಅಲೋಪತಿ ಪರ್ಯಾಲೋಚನೆ
ವಾರದ ಗ್ರಾಮೀಣ ಅಲೋಪತಿ ಆರೋಗ್ಯ ರಕ್ಷಣಾ ಶಿಬಿರ
ಗ್ರಾಮೀಣ ಆರೋಗ್ಯ ಹಾಗೂ ನೈರ್ಮಲ್ಯದ ಚಳುವಳಿ

ಕೆಲಸ ಮಾಡುವುದು, ಪಾನ ನಿರೋಧ, ಅಭಿವೃದ್ಧಿಯ ಬಗ್ಗೆ ಸ್ಪಷ್ಟ ತಿಳುವಳಿಕೆ—ಇವುಗಳನ್ನು ನೋಡಿ ಯಾವ ಸಂದರ್ಶಕರಿಗಾದರೂ ಆಶ್ಚರ್ಯವಾಗದೆ ಇರದು. ಹೀಗೆ ಸ್ವಾಮೀಜಿಯ ಯೋಜನೆಗಳನ್ನು ಕ್ರಮಶಃ ಆಚರಣೆಗೆ ತಂದದ್ದೇ ಆದರೆ—ಬರಿಯ ಆರ್ಥಿಕ ಅಥವಾ ಬರಿಯ ಆಧ್ಯಾತ್ಮಿಕ ಅಭಿವೃದ್ಧಿಯ ಬದಲು—ಮಾನವನ ಪೂರ್ಣ ಬೆಳವಣಿಗೆ ಸಾಧ್ಯ ಎಂಬುದರ ಬಗ್ಗೆ ನಮ್ಮ ದೃಷ್ಟಿ ಸ್ಪಷ್ಟವಾಗುತ್ತದೆ. ಕಾರ್ಯಸೂತ್ರ ಬಹಳ ಸರಳ: "ಭಾರತದಲ್ಲಿ ಶಿಕ್ಷಣ ಮತ್ತು ಆಧ್ಯಾತ್ಮಿಕತೆಯನ್ನು ಕೆಳವರ್ಗದ ಜನರಲ್ಲಿ ಹರಡುವುದು ಮೊದಲ ಮತ್ತು ಅತ್ಯಗತ್ಯವಾದ ಕಾರ್ಯ. ಹೊಟ್ಟೆಗೆ ಆಹಾರ ಹಾಕಲು ವ್ಯವಸ್ಥೆ ಇಲ್ಲದಿದ್ದರೆ ಹಸಿದವರು ಆಧ್ಯಾತ್ಮಿಕತೆ ಹೊಂದುವುದು ಅಸಾಧ್ಯ. ಹೀಗಾಗಿ ಆಹಾರ ಉತ್ಪಾದನೆಯ ಹೊಸ ವಿಧಾನಗಳನ್ನು ಕಲಿಸುವುದು ನಮ್ಮ ಪ್ರಧಾನ ಕರ್ತವ್ಯ."

ನಮ್ಮ ಸಮಾಜ ಪಟ್ಟಣಿಗರ ಅಗತ್ಯಗಳ ಬಗ್ಗೆಯೇ ಹೆಚ್ಚು ಯೋಚಿಸುತ್ತ ಆ ಬಗ್ಗೆಯೇ ತನ್ನ ಮುಖ್ಯ ಗಮನ ಹರಿಸುತ್ತಿರುವುದು ವಿಪರ್ಯಾಸ. ಈ ಅಸಮಾನತೆಯನ್ನು ಹಳ್ಳಿಯ ಬಡವರನ್ನು ಮೇಲೆತ್ತುವ ಕೆಲಸ ಮಾಡುವ ಮೂಲಕ ಸರಿಪಡಿಸಬೇಕು. ದಿವ್ಯಾಯನದಂತಹ ಅನೇಕ ಕೇಂದ್ರಗಳು ಉದ್ಭವವಾಗಬೇಕು. ಸುಶಿಕ್ಷಿತ ಜನರು ತಮ್ಮ ಶಕ್ತಿ ಹಾಗೂ ಸಮಯದ ಸ್ವಲ್ಪ ಭಾಗವನ್ನಾದರೂ ವಂಚಿತ, ನಿರಾಶ್ರಿತ ಹಳ್ಳಿಯ ಸಮೂಹದ ಅಭಿವೃದ್ಧಿಗಾಗಿ ಮೀಸಲಿಡಬೇಕು. ಹಳ್ಳಿಯ ಸಮೂಹಗಳು ಜಾಗ್ರತರಾದರೆ, ನಮ್ಮ ಸಮಾಜದ ಎಲ್ಲ ಅನಿಷ್ಟಗಳೂ ತನ್ನಷ್ಟಕ್ಕೇ ಮೂಲೋತ್ಪಾಟನ ಹೊಂದುವುವು; ನಮ್ಮ ದೇಶದ ಅತಿ ವೇಗದ ಅಭಿವೃದ್ಧಿಯಲ್ಲಿ ಅವರೂ ಭಾಗವಹಿಸುವರು.